ಡಾ. ಎಚ್ ಎನ್ ಮಂಜುರಾಜ್
ಕನ್ನಡದ ಸಹಪ್ರಾಧ್ಯಾಪಕ
ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕೃಷ್ಣರಾಜನಗರ

ಚಾರುಮನೆ' #5028-23
ಜೈಲು ಮತ್ತು ಚರ್ಚ್ ಹಿಂಭಾಗ
ಕನಕನಗರ ಬಡಾವಣೆ
ಕೃಷ್ಣರಾಜನಗರ-571602, ಮೈಸೂರು ಜಿಲ್ಲೆ

ಮಾತಾಡಲು: 9900119518, 9480966890, ಮಿಂಚಂಚೆ: 1) manjugraj1969@gmail.com 2) manjupage@gmail.com
ಮಿಂಬ್ಲಾಗು: www. manjupage.blogspot.com please type on google: MANJUPEJU

---

# ನಮ್ಮೂರಲ್ಲೊಂದು ಕ್ಯಾಂಪಸ್‌ನ ಅಗತ್ಯವಿದೆ !

ನಮ್ಮ ಕೃಷ್ಣರಾಜನಗರವು ಮಾದರಿ ನಗರವಾಗುವುದರ ಹಿಂದೆ ಹಲವು ಮಹನೀಯರ ಕೈಗಳು ಜೊತೆಯಾದದ್ದು ಇತಿಹಾಸ. ನಾಲ್ವಡಿಯವರು, ವಿಶ್ವೇಶ್ವರಯ್ಯನವರು, ಮಿರ್ಜಾ ಇಸ್ಮಾಯಿಲ್ ಅವರು, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಜೊತೆಗೆ ಜರ್ಮನಿಯಿಂದ ಬಂದು ಯೋಜನೆಯ ನಕ್ಷೆ ರೂಪಿಸಿಕೊಟ್ಟ ಕ್ರೆಂಬಿಗಲ್ ಅವರು ಹೀಗೆ. . . . . .

ಮೈಸೂರು ಜಿಲ್ಲೆಯ ಯಾವ ತಾಲೂಕಿಗೂ ಇಂಥ ಸೌಭಾಗ್ಯ ಸಿಗಲಿಲ್ಲ. ಕಾವೇರಿ ತಾಯಿ, ಅರ್ಕೇಶ್ವರ ಸನ್ನಿಧಿ, ರಾಜರ್ಷಿಗಳ ಒಲವು ಹೀಗೆ ಈ ಎಲ್ಲರ ಹಾರೈಕೆಗಳು ಈ ನಗರ ನಿರ್ಮಾಣದ ಸಂದರ್ಭದಲ್ಲಿ ಒತ್ತಾಸೆಯಾದವು.

ಈ ಪೀಠಿಕೆ ಏಕೆಂದರೆ ಇನ್ನೊಂದು ವಿಚಾರದಲ್ಲೂ ನಮ್ಮ ಪಟ್ಟಣವು ವಿಶೇಷ. ಬೊಂಬಾಯಿ ರಾಮಸ್ವಾಮಿ ಎಂದೇ ಹೆಸರಾಗಿದ್ದ ಕೊಡುಗೈದಾನಿಗಳು ಕೆ ಆರ್ ನಗರದ ಎತ್ತರದ ಜಾಗ ಎಂದೇ ಬಿಂಬಿತವಾದ ಕಾಲೇಜುಗಳಿರುವ ವಿಶಾಲ ಮೈದಾನವನ್ನು 'ಶೈಕ್ಷಣಿಕ ಬಳಕೆ'ಗಾಗಿ ಬಿಟ್ಟುಕೊಟ್ಟರು. ಮಾತ್ರವಲ್ಲ, ಮುಂದೆ ಬಂದ ನಗರ ನಿರ್ಮಾಣ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಮಾಸ್ತಿಯವರ ದೂರದೃಷ್ಟಿಯಿಂದ ಸರ್ಕಾರಿ ಶಿಕ್ಷಣ ಸಂಸ್ಥೆಗಳು ಒಂದೆಡೆ ನೆಲೆ ನಿಂತವು.

ನಗರದ ಹೃದಯಭಾಗದಲ್ಲಿ ಪಿಯು ಕಾಲೇಜುಗಳು, ಡಿಗ್ರಿ ಕಾಲೇಜುಗಳು, ಸರ್ಕಾರಿ ಹೈಸ್ಕೂಲುಗಳು, ಆದರ್ಶ, ಕಸ್ತೂರ್ ಬಾ ವಸತಿಶಾಲೆ, ಐಟಿಐ ಕಾಲೇಜು, ವಿದ್ಯಾರ್ಥಿ ನಿಲಯಗಳು ಹೀಗೆ ಒಂದೇ ಕಡೆ- ವಿಶಾಲ ಮೈದಾನಸಹಿತ- ಇರುವುದನ್ನು ನಾನಂತೂ ಬೇರೆಡೆ ಕಂಡಿಲ್ಲ; ಮೈಸೂರು ಜಿಲ್ಲೆಯ ಬೇರಾವ ತಾಲೂಕಿಗೂ ಈ ಭಾಗ್ಯವಿಲ್ಲ.

ಇನ್ನೂ ಇರುವ ಜಾಗದಲ್ಲಿ ಉದಾಹರಣೆಗೆ ಎಲ್ ಐ ಸಿ ಎದುರಿನ ಸಾಲು, ಹುಡುಗರ ವಿದ್ಯಾರ್ಥಿನಿಲಯದ ಎದುರಿನ ಸಾಲು- ಇಲ್ಲಿ ಇನ್ನಷ್ಟು ಶಿಕ್ಷಣಸಂಸ್ಥೆ ಅಥವಾ ಈಗಿರುವ ಎರಡು ಪಿಯು ಕಾಲೇಜುಗಳ ಹೆಚ್ಚುವರಿ ಕಟ್ಟಡ ಅಥವಾ ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಬಿಎಡ್ ಕಾಲೇಜು, ಎರಡೂ ಪದವಿ ಕಾಲೇಜುಗಳ ಸ್ನಾತಕೋತ್ತರ ಕೇಂದ್ರದ ಕಟ್ಟಡ- ಈ ರೀತಿಯಾಗಿ ತೆರೆಯಲು ಅವಕಾಶವಿದೆ.

ಇವನ್ನೇ ಬಳಸಿಕೊಂಡು ಈ ಶಿಕ್ಷಣ ಸಂಸ್ಥೆಗಳೆಲ್ಲವನ್ನು ಒಂದು ಚೌಕಟ್ಟಿಗೊಳಪಡಿಸಿ, ಶೈಕ್ಷಣಿಕ ಸಂಕೀರ್ಣ (Educational Complex) ವನ್ನು ರಚಿಸಿ, ರಾಜರ್ಷಿ ನಾಲ್ವಡಿ ವಿದ್ಯಾನಿಕೇತನ ಎಂಬಂಥ ಹೆಸರಿಟ್ಟು, ಅಭಿವೃದ್ಧಿಪಡಿಸುವುದಾದರೆ ಚೆಂದವಿರುತ್ತದಲ್ಲವೆ? ಸುತ್ತಲೂ ಒಂದು ಪ್ರಧಾನ ಕಾಂಪೌಂಡ್ ನಿರ್ಮಿಸಿ, ಮುಖ್ಯದ್ವಾರ ರಚಿಸಿ, 24X7 ಸೆಕ್ಯುರಿಟಿ ಇರುವಂಥ ವ್ಯವಸ್ಥೆ ಸಾಧ್ಯವಾಗುವುದಾದರೆ ಚೆಂದ ಮಾತ್ರವಲ್ಲ, ಹಲವು ಅನುಕೂಲಗಳುಂಟಾಗಿ, ಕಲಿಕೆಗೂ-ಕಲಿಕಾರ್ಥಿಗೂ-ಕಲಿಸುವ ಶಕ್ತಿಗೂ ಪ್ರೋತ್ಸಾಹ ನೀಡಿದಂತಾಗುವುದು.

ಈ ವಿಚಾರ ಅಥವಾ ಪರಿಕಲ್ಪನೆಯ ಪ್ರಸ್ತಾಪ ಹೊಸದಲ್ಲ, ಹಲವು ಶೈಕ್ಷಣಿಕ ಸಭೆ-ಸಮಾರಂಭಗಳಲ್ಲಿ ಸನ್ಮಾನ್ಯ ಶಾಸಕರಾದ ಶ್ರೀ ಸಾ ರಾ ಮಹೇಶ್ ಅವರೂ ಮಾಜಿ ಸಂಸದರೂ ಮಾಜಿ ಶಿಕ್ಷಣ ಸಚಿವರೂ ಆದ ಶ್ರೀ ಅಡಗೂರು ಎಚ್ ವಿಶ್ವನಾಥ್ ಅವರೂ ಪ್ರಸ್ತಾಪ ಮಾಡಿರುತ್ತಾರೆ. ಹಾಗಾಗಿ, ಈ ಕೈಂಕರ್ಯ ಶೀಘ್ರವಾಗಿ ಆದರೆ ನಿಜವಾದ ಅರ್ಥದಲ್ಲಿ ಶೈಕ್ಷಣಿಕ ಮಾದರಿ ನಗರವಾಗುವುದರಲ್ಲಿ ಸಂಶಯವಿಲ್ಲ. ಜೊತೆಗೆ ಶೈಕ್ಷಣಿಕ ವಾತಾವರಣ ಆಯಾಚಿತವಾಗಿ ಏರ್ಪಡುತ್ತದೆ.

ಸುತ್ತಲೂ ಕಾಂಪೌಂಡ್ ಇದ್ದು, ಎತ್ತರವಾದ ಗೇಟ್ ಇದ್ದು, ರಾತ್ರಿವೇಳೆ ದೀಪ ಮತ್ತು ಪಹರೆ/ಗಸ್ತು ವ್ಯವಸ್ಥೆಯಾದರೆ ಈ ಪವಿತ್ರ ಸ್ಥಳದಲ್ಲಿ ಯಾವುದೇ ಅಶಿಸ್ತು, ನಿಯಮಬಾಹಿರ ಚಟುವಟಿಕೆಗಳು ನಡೆಯಲಾರದು. (ಫಲಾನುಭವಿ ಶಿಕ್ಷಣ ಸಂಸ್ಥೆಗಳು ಕೈಜೋಡಿಸಿ, ಖಾಸಗಿ ಸೆಕ್ಯುರಿಟಿ ನೇಮಿಸಿಕೊಂಡರೆ, ಶಿಕ್ಷಣೇತರ ಚಟುವಟಿಕೆಗಳು ತಹಬಂದಿಗೆ ಬರುತ್ತದೆ)

ಇದರಿಂದ, ಮಾನವ ಸಂಪನ್ಮೂಲ ಸಚಿವಾಲಯ ಮತ್ತು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗಗಳು ವಿಧಿಸುವ ಷರತ್ತಿನಂತೆ 'ವಿಶಾಲ ಕ್ಯಾಂಪಸ್' ರಚನೆಯಾಗುವುದು.

ಪಟ್ಟಣದ ಎರಡೂ ಪದವಿ ಕಾಲೇಜುಗಳು ಮತ್ತು ಸಾಲಿಗ್ರಾಮದ ಒಂದು ಪದವಿ ಕಾಲೇಜು- ಈ ಮೂರೂ ಕಾಲೇಜುಗಳನ್ನು ಮೈಸೂರು ವಿವಿಯು ಬೆಸೆದು, ಕ್ಲಸ್ಟರ್ ಕೇಂದ್ರ ರಚಿಸಲು ಸಹಾಯಕವಾಗುವುದು. ಕಾಮನ್ ಆದ ಒಂದು ಕ್ಯಾಂಟೀನ್, ಒಂದು ವಾಹನ ನಿಲ್ದಾಣ (Vehicle parking) ನಿರ್ಮಿಸಿದರೆ ಕ್ಯಾಂಪಸ್‌ಗೆ ಅರ್ಥ ಬರುವುದು.

ಈಗಿನ ಮಾನಸಗಂಗೋತ್ರಿ ಅಥವಾ ಮುಕ್ತ ವಿವಿಯ ಕ್ಯಾಂಪಸ್‌ನಂತೆ ಸುತ್ತಲೂ ಕಟ್ಟಡಗಳು, ನಡುವೆ ಗ್ರೀನರಿ, ಕುಡಿಯುವ ನೀರು, ಸ್ಟೇಷನರಿ ಅಥವಾ ಜೆರಾಕ್ಸ್ ಅಂಗಡಿ, ಇಂಟರ್ನೆಟ್ ಮತ್ತು ಬ್ರೌಸಿಂಗ್ ಸೆಂಟರ್, ಪ್ರಿಂಟಿಂಗ್ ಕಾರ್ನರ್, ಬ್ಯಾಂಕೊಂದರ ವಿದ್ಯಾರ್ಥಿ ಶಾಖೆ ಹೀಗೆ ನಮ್ಮೂರಲ್ಲೂ ನಾವ್ಯಾಕೆ 'ಮಿನಿ ಗಂಗೋತ್ರಿ' ಯನ್ನು ಹೊಂದಬಾರದು? ಜಾಗ ಇದೆ, ಶಿಕ್ಷಣಸಂಸ್ಥೆಗಳಿವೆ, ವಿದ್ಯಾರ್ಥಿಗಳು ಅಪಾರವಾಗಿದ್ದಾರೆ ಆದರೆ ಒಂದು ಸಮಾನವಾದ ಸೂತ್ರ ಮತ್ತು ಪಾತ್ರ ಏರ್ಪಡಬೇಕಾಗಿದೆ.

ಮಾನ್ಯ ಶಾಸಕರು, ಜನಪ್ರತಿನಿಧಿಗಳು, ಸರ್ಕಾರದ ಅಧಿಕಾರಿಗಳು, ಸ್ಥಳೀಯ ಪುರಸಭೆ, ಹಿರಿಯ ಶಿಕ್ಷಣಪ್ರೇಮಿಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಫಲಾನುಭವಿ ಕಾಲೇಜುಗಳ ಮುಖ್ಯಸ್ಥರು, ಮಾಧ್ಯಮಮಿತ್ರರು ಒಟ್ಟಾಗಿ ಕಲೆತು ಚರ್ಚಿಸಿ, ಸಮಾನಾಭಿಪ್ರಾಯ ರೂಪಿಸಿ, ಇಂಥ ರಚನಾತ್ಮಕ ಕೆಲಸವನ್ನು ಆಗು ಮಾಡಿದರೆ ಅದರ ಖದರೇ ಬೇರೆ!

ಇದರ ಸಾಧಕ-ಬಾಧಕಗಳನ್ನು ಮುಕ್ತವಾಗಿ ಚರ್ಚಿಸಿ, ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಇಂಥ ಒಂದು ಪ್ರಾಜೆಕ್ಟ್ ಅನ್ನು ಕಾರ್ಯಗತಗೊಳಿಸಬಹುದಲ್ಲವೆ? ಸರ್ಕಾರ-ಪುರಸಭೆ ಸಹಾಯ ಮಾಡಬಹುದಲ್ಲವೆ? ಏನಂತೀರಿ??

****************